ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 20-08-1971.

*<u>ಎಲ್ಲಕ್ಕಿಂತ ಶ್ರೇಷ್ಠ ಸಿಂಹಾಸನ ಮತ್ತು ಕಿರೀಟ</u>* (सबसे श्रेष्ठ तख्त और ताज़)

ಇಂದು ಈ ಭಟ್ಟಿಯ ಗುಂಪು ಡಬಲ್ ಭಟ್ಟಿ ಮಾಡಲು ಬಂದಿರುವರು. ಡಬಲ್ ಭಟ್ಟಿ ಯಾವುದು? ಡಬಲ್ ಭಟ್ಟಿಯ ರಹಸ್ಯವನ್ನು ತಿಳಿದಿರುವಿರಾ? ಮಧುಬನದ ಭಟ್ಟಿಯೇ ಆಗಿದೆ. ಆದರೆ ಮಧುಬನದ ಭಟ್ಟಿಯಲ್ಲಿ ವಿಶೇಷ ತಮ್ಮ ಉಳಿದ ಸಂಸ್ಕಾರಗಳನ್ನು ಭಸ್ಮ ಮಾಡಲು ಬಂದಿರುವಿರಲ್ಲವೇ? ಡಬಲ್ ಭಟ್ಟಿಯ ಬಲವೂ ಹೆಚ್ಚುವುದಲ್ಲವೇ. ಏಕೆಂದರೆ ಕೋರ್ಸ್ ಸಿಗುತ್ತದೆ. ಒಂದು ಸಾಮಾನ್ಯ, ಇನ್ನೊಂದು ವ್ಯಕ್ತಿಗತ, ಡಬಲ್ ಕೋರ್ಸ್ ಆಗುವ ಕಾರಣ ಡಬಲ್ ಬಲವೂ ಹೆಚ್ಚುವುದು. ಇದು ಹೇಗೆ ಹೆಚ್ಚಾಗುವುದೋ ಹಾಗೆ ಸದಾ ನಿಮ್ಮನ್ನು ಡಬಲ್ ಕಿರೀಟಧಾರಿ ಎಂದು ತಿಳಿದು ನಡೆದರೆ ಈ ಡಬಲ್ ಕೋರ್ಸ್ - ಬಲವನ್ನು(ಫೋರ್ಸ್) ತುಂಬುವುದು. ಡಬಲ್ ಕಿರೀಟ ಯಾವುದು? ಈಗ ಡಬಲ್ ಕಿರೀಟಧಾರಿಗಳಾಗಿದ್ದೀರಾ ಅಥವಾ ಭವಿಷ್ಯದಲ್ಲಿ ಆಗುವಿರಾ? ಈಗ ಡಬಲ್ ಕಿರೀಟ ಯಾವವು? ಒಂದು ಲೈಟ್ ನ ಎಂದರೆ ಪವಿತ್ರತೆಯ ಚಿಹ್ನೆಯದು ಇನ್ನೊಂದು ಸಂಗಮಯುಗದಲ್ಲಿ ಯಾವೆಲ್ಲಾ ಪ್ರಾಪ್ತಿಗಳಾಗುತ್ತವೆಯೋ, ಯಾವ ಶಕ್ತಿಯಿಂದ ಜವಾಬ್ದಾರಿಯನ್ನು ಧಾರಣೆ ಮಾಡಬಲ್ಲಿರೋ ಅದು. ಆದ್ದರಿಂದ ಲೈಟನ ಕಿರೀಟದ ಜೊತೆಗೆ ಶಕ್ತಿಯದೂ ಇದೆ. ಪವಿತ್ರತೆಯದೂ ಮತ್ತು ಶಕ್ತಿಯದು, ಈ ಡಬಲ್ ಕಿರೀಟಗಳನ್ನು ನಿರಂತರ ಧಾರಣೆ ಮಾಡುವವರು, ಹಾಗಾದರೆ ಹೇಳಿ, ಡಬಲ್ ಬಲ ಸದಾ ಕಾಯಂ ಇರಲಾರದೇ? ಎರಡರ ಅವಶ್ಯಕತೆಯಿದೆ. ಮತ್ತು ಎರಡೂ ಸದಾ ಕಾಯಂ ಇರುವುದರಿಂದ ಸದಾ ಶಕ್ತಿಶಾಲಿ ಸ್ವರೂಪ ಕಂಡುಬರುವುದು. ಸೇವೆಯಲ್ಲಿ ಸಫಲತೆ ಪ್ರಾಪ್ತಿ ಮಾಡಿಕೊಳ್ಳಲು ಸಹ ಈ ಎರಡು ಕಿರೀಟಗಳು ಅವಶ್ಯಕವಾಗಿವೆ. ಎಷ್ಟೆಷ್ಟು ನಂಬರವಾರ್ ಪ್ರತಿಯೊಬ್ಬರೂ ಧಾರಣೆ ಮಾಡಿರುವರೋ ಅದಕ್ಕನುಸಾರ ಸ್ವರೂಪದಲ್ಲಿ ಸಫಲತೆ ಅಥವಾ ತಮ್ಮ ಪುರುಷಾರ್ಥದಲ್ಲಿ ಸಫಲತೆಯನ್ನು ಪಡೆಯುತ್ತಿದ್ದಾರೆ. ಆದ್ದರಿಂದ ಡಬಲ್ ಕಿರೀಟಗಳೂ ಬೇಕು ಮತ್ತು ಡಬಲ್ ಸಿಂಹಾಸನವೂ ಬೇಕು.

ಡಬಲ್ ಸಿಂಹಾಸನ ಯಾವವು? (ಪ್ರತಿಯೊಬ್ಬರೂ ತಮ್ಮ ಪ್ರತಿಕ್ರಿಯೆ ತೋರಿಸಿದರು) ಒಂದು ಬಾಪ್ ದಾದಾರ ಹೃದಯ ಸಿಂಹಾಸನಾಧಿಕಾರಿಯಾಗುವುದು. ಎಲ್ಲಕ್ಕಿಂತ ಶ್ರೇಷ್ಠ ಸಿಂಹಾಸನವಾಗಿದೆ ಹೃದಯ ಸಿಂಹಾಸನಾಧಿಕಾರಿಯಾಗುವುದು. ಜೊತೆಗೆ ಈ ಸಿಂಹಾಸನದ ಮೇಲೆ ಕುಳಿತುಕೊಳ್ಳಲು ಅಚಲ, ಅಡೋಲ, ಏಕರಸ ಸ್ಥಿತಿಯ ಸಿಂಹಾಸನ ಬೇಕು. ಈ ಸ್ಥಿತಿಯ ಸಿಂಹಾಸನದ ಮೇಲೆ ಸ್ಥಿತರಾಗದಿದ್ದರೆ ಬಾಪ್ ದಾದಾರ ಹೃದಯ ರೂಪಿ ಸಿಂಹಾಸನದ ಮೇಲೆಯೂ ಸ್ಥಿತರಾಗಲಾರಿರಿ. ಆದ್ದರಿಂದ ಈ ಅಚಲ, ಅಡೋಲ ಏಕರಸ ಸ್ಥಿತಿಯ ಸಿಂಹಾಸನ ಬಹಳ ಅವಶ್ಯಕವಾಗಿದೆ. ಈ ಸಿಂಹಾಸನದಿಂದ ಪದೇಪದೇ ಡಗಮಗವಾಗುತ್ತೀರಿ. ಆದ್ದರಿಂದ ಅಕಾಲಸಿಂಹಾಸನಾಧಿಕಾರಿ ಆಗದೇ ಇರುವ ಕಾರಣ ಈ ಏಕರಸ ಸ್ಥಿತಿಯ ಆಸನದ ಮೇಲೆಯೂ ಸ್ಥಿತರಾಗಲಾರಿರಿ. ಹಾಗಾದರೆ ಈ ಭ್ರುಕುಟಿಯ ಆಸನದ ಮೇಲೆ ಅಕಾಲಮೂರ್ತಿಯಾಗಿ ಸ್ಥಿತರಾದರೆ ಏಕರಸ ಸ್ಥಿತಿಯ ಆಸನದ ಮೇಲೆ ಮತ್ತು ಬಾಪ್ ದಾದಾರ ಹೃದಯದ ಆಸನದ ಮೇಲೆ ವಿರಾಜಮಾನರಾಗುವಿರಿ. ಆದ್ದರಿಂದ ಡಬಲ್ ಕಿರೀಟಧಾರಿಯೂ ಆಗಿದ್ದೀರಿ. ಡಬಲ್ ಆಸನಧಾರಿಗಳು ಸಹ ಆಗಿದ್ದೀರಿ.

ಸಿಗುವಂತಹ ಜ್ಞಾನವೂ ಸಹ ಮುಖ್ಯವಾಗಿ ಎರಡು ಮಾತುಗಳದು . ಅವು ಯಾವವು? ತಂದೆ ಮತ್ತು ವಾರಸತ್ವ ಎಂದಾದರೂ ಹೇಳಿ ಅಥವಾ "ರಚಯಿತ" ಮತ್ತು "ರಚನೆ" ಎಂದಾದರೂ ಹೇಳಿ, ರಚನೆಯಲ್ಲಿ ಪೂರ್ಣ ಜ್ಞಾನ ಬರುತ್ತದೆ. ಆದ್ದರಿಂದ ರಚಯಿತ ಮತ್ತು ರಚನೆ - ಈ ಎರಡು ಮುಖ್ಯ ಮಾತುಗಳಲ್ಲಿ ಜ್ಞಾನಪೂರ್ಣರಾದರೆ ಶಕ್ತಿಪೂರ್ಣರೂ ಆಗುವಿರಿ. ರಚನೆಯ ಜ್ಞಾನದಲ್ಲಿ ಪೂರ್ಣರಾಗಿಲ್ಲವಾದರೆ, ದುರ್ಬಲರಾಗಿರುವದರಿಂದ ಸ್ಥಿತಿ ಗೂಂದಲದ್ದಾಗುತ್ತದೆ. ರಚನೆಯ ಪೂರ್ಣ ಜ್ಞಾನವನ್ನು ತಿಳಿದುಕೊಳ್ಳಬೇಕು, ಕೇವಲ ಕೇಳುವುದಕ್ಕೆ ತಿಳಿದು ಕೊಳ್ಳುವುದು ಎಂದು ಹೇಳುವುದಿಲ್ಲ. ತಿಳಿದುಕೊಳ್ಳುವುದು ಎಂದರೆ ಅರ್ಥಮಾಡಿಕೊಳ್ಳುವುದು ಮತ್ತು

ಅದರಂತೆ ನಡೆಯುವುದು ಇದಕ್ಕೆ ಹೇಳಲಾಗುತ್ತದೆ. ಜ್ಞಾನಪೂರ್ಣ. ಅರ್ಥಮಾಡಿಕೊಂಡು ನಡೆಯದಿದ್ದರೆ ಜ್ಞಾನಪೂರ್ಣ ಅಥವಾ ಜಾನಸ್ವರೂಪ ಎಂದು ಹೇಳಲಾಗುವುದಿಲ್ಲ. ನಡೆಯುವುದು ಅರ್ಥಮಾಡಿಕೊಳ್ಳುವುದು ಎಂದರೆ ಸ್ವರೂಪವಾಗುವುದು. ಅಲ್ಪಸ್ವಲ್ಪ ರಚಯಿತ ಮತ್ತು ರಚನೆಯ ಜ್ಞಾನದ ಕೊರತೆಯ ಕಾರಣ ಪುರುಷಾರ್ಥದಲ್ಲಿ ಕೊರತೆ ಬರುತ್ತದೆ. ಆದ್ದರಿಂದ ಜ್ಞಾನವೆಲ್ಲದರ ಈ ಎರಡು ಮಾತುಗಳನ್ನು ಗಮನದಲ್ಲಿಟ್ಟುಕೊಂಡು ನಡೆಯಿರಿ. ಒಳ್ಳೆಯದು ಇದಾಯಿತು ಜ್ಞಾನ ಅದೇ ರೀತಿ ಡಬಲ್ ಕರ್ತವ್ಯದಲ್ಲಿಯೂ ಇರಬೇಕು.

ಈ ಡಬಲ್ ಕರ್ತವ್ಯ ಯಾವುದು? ಇಂದು ಎರಡರ ಎಣಿಕೆಯನ್ನು ಮಾತ್ರ ಹೇಳುತ್ತಿದ್ದೇವೆ. ಎರಡು ಕರ್ತವ್ಯಗಳನ್ನು ಹೇಳಿ. ಇಡೀ ದಿನದಲ್ಲಿ ತಮ್ಮ ಡಬಲ್ ಕರ್ತವ್ಯ ನಡೆಯುತ್ತಿರುತ್ತದೆ. ಮುಖ್ಯ ಕರ್ತವ್ಯವಾಗಿದೆ ವಿನಾಶ ಮತ್ತು ಸ್ಥಾಪನೆಯದು. ಕೆಲವನ್ನು ವಿನಾಶ ಮಾಡಬೇಕು ಮತ್ತು ಕೆಲವನ್ನು ರಚನೆ ಮಾಡಬೇಕು. ಎಲ್ಲಾ ಪ್ರಕಾರದ ರಚನೆಯನ್ನು ಮಾಡುತ್ತೀರಿ. ಒಂದು ಸೇವೆಯಿಂದ ತಮ್ಮ ರಾಜಧಾನಿಯ ರಚನೆ ಮಾಡುತ್ತಿರುವಿರಿ ಮತ್ತು ಎರಡನೆಯದು ಬುದ್ಧಿಯಲ್ಲಿ ಶುದ್ಧ ಸಂಕಲ್ಪಗಳ ರಚನೆಯನ್ನು ಮಾಡಬೇಕು ಮತ್ತು ವ್ಯರ್ಥ ಸಂಕಲ್ಪಗಳು ಮತ್ತು ವಿಕಲ್ಪಗಳ ವಿನಾಶದ ವಿಧಿಯನ್ನು ತಾವು ತಿಳಿದುಕೊಂಡಿರುವಿರಿ. ರಚನೆ ಮನಸ್ಸಿನಿಂದಲೂ ಮತ್ತು ವಾಣಿಯಿಂದಲೂ, ಎರಡೂ ಪ್ರಕಾರದ ರಚನೆಯನ್ನು ಮಾಡುತ್ತೀರಿ. ಈ ಪ್ರಕಾರ ಡಬಲ್ ಕರ್ತವ್ಯ ಮಾಡುತ್ತೀರಿ. ಇದೇ ಕಾರ್ಯದಲ್ಲಿ ಇಡೀ ದಿನ ವ್ಯಸ್ತರಾಗಿದ್ದರೆ ಏಕರಸ ಸ್ಥಿತಿಯಾಗುವುದಿಲ್ಲವೇ ಹೇಳಿ? ಏಕರಸ ಸ್ಥಿತಿಯಿಲ್ಲದಿರುವುದಕ್ಕೆ ಕಾರಣ ರಚನೆ ಮಾಡಲು ಬರುತ್ತಿಲ್ಲ ಅಥವಾ ವಿನಾಶ ಮಾಡಲು ಬರುತ್ತಿಲ್ಲ. ಎರಡೂ ಕರ್ತವ್ಯಗಳಲ್ಲಿ ಕೊರತೆಯಿರುವ ಕಾರಣ ಏಕರಸ ಸ್ಥಿತಿಯಲ್ಲಿ ಇರಲಾಗುವುದಿಲ್ಲ. ಆದ್ದರಿಂದ ಡಬಲ್ ಕರ್ತವ್ಯ ದಲ್ಲಿರಬೇಕು. ಈ ಡಬಲ್ ಕರ್ತವ್ಯವನ್ನೂ ಸ್ವಮಾನದಲ್ಲಿದ್ದಾಗಲೇ ಮಾಡಲು ಸಾಧ್ಯ.

ಡಬಲ್ ಪದವಿ ಯಾವುದು? ಈ ಸಮಯವನ್ನು ಕೇಳುತ್ತಿದ್ದೇವೆ. ದೇವತ್ವದ ಪದವಿಗಿಂತ ಈ ಸಮಯದ ಪದವಿ ಶ್ರೇಷ್ಠವಾಗಿದೆ. ಒಂದಾಗಿದೆ ಈಶ್ವರೀಯ ಸಂತಾನರು, ಬ್ರಹ್ಮಾಕುಮಾರ- ಕುಮಾರಿಯರೂ ಆಗಿದ್ದೇವೆ. ಇದಾಯಿತು ಸಾಕಾರಿ ಪದವಿ ಮತ್ತು ಎರಡನೆಯದಾಗಿದೆ. ನಿರಾಕಾರಿ ಪದವಿ. ನಾವು ಎಲ್ಲಾ ಆತ್ಮರಲ್ಲಿ ನಾಯಕ ಪಾತ್ರಧಾರಿ ಆತ್ಮರು. ಶ್ರೇಷ್ಠ ಆತ್ಮರು ಮತ್ತು ಎರಡನೆಯ ಪದವಿಯಾಗಿದೆ ಈಶ್ವರೀಯ ಸಂತಾನ ಬ್ರಹ್ಮಾಕುಮಾರ ಕುಮಾರಿಯರದು. ಈ ಎರಡೂ ಸ್ಥಾನಮಾನ ಸ್ಮೃತಿಯಲ್ಲಿದ್ದರೆ ಕರ್ಮ ಮತ್ತು ಸಂಕಲ್ಪ ಎರಡೂ ಶ್ರೇಷ್ಠವಾಗುವವು. ಶ್ರೇಷ್ಠ ಆತ್ಮ ಅಥವಾ ನಾಯಕ ಎಂದು ತಮ್ಮನ್ನು ತಿಳಿದುಕೊಳ್ಳುವುದರಿಂದ ಈಶ್ವರೀಯ ಮರ್ಯಾದೆಗಳಿಗೆ ಅಥವಾ ಬ್ರಾಹ್ಮಣ ಕುಲದ ಮರ್ಯಾದೆಗಳಿಗೆ ವಿರೋಧವಾಗಿರುವಂತಹ ಯಾವುದೇ ವ್ಯವಹಾರ ಮಾಡುವುದಿಲ್ಲ. ಆದ್ದರಿಂದ ಈ ಎರಡೂ ಪದವಿಗಳು ಸ್ಮೃತಿಯಲ್ಲಿರುವುದರಿಂದ ಮಾಯೆಯ ವಿರೋಧ ನಾಶವಾಗುವುದು. ಆದ್ದರಿಂದ ಡಬಲ್ ಪದವಿಯೂ ಸದಾ ಸ್ಮೃತಿಯಲ್ಲಿರಬೇಕು.

ಡಬಲ್ ಗುರಿ ಯಾವುದು? ಯಾವುದು ಡಬಲ್ ನಡೆಯೋ ಅದೇ ಡಬಲ್ ಗುರಿ. ಒಂದಾಗಿದೆ ನಿರಾಕಾರಿ ಗುರಿ, ಸದಾ ತಮ್ಮನ್ನು ನಿರಾಕಾರಿ ದೇಶದ ನಿವಾಸಿ ಎಂದು ತಿಳಿಯುವುದು ಮತ್ತು ನಿರಾಕಾರಿ ಸ್ಥಿತಿಯಲ್ಲಿ ಸ್ಥಿತರಾಗುವುದು. ಸಾಕಾರದಲ್ಲಿರುತ್ತಾ ತಮ್ಮನ್ನು ನಿರಾಕಾರಿ ಎಂದು ತಿಳಿದು ನಡೆಯುವುದು. ಒಂದಾಗಿದೆ ಆತ್ಮ- ಅಭಿಮಾನಿಯಾಗುವ ಗುರಿ ಮತ್ತು ಇನ್ನೊಂದು - ನಿರ್ವಿಕಾರಿ ಸ್ಥಿತಿ, ಅದರಲ್ಲಿ ಮನಸ್ಸಿನ ನಿರ್ವಿಕಾರಿತನದ ಸ್ಥಿತಿ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಒಂದಾಗಿದೆ ನಿರಾಕಾರಿ ಗುರಿ ಮತ್ತು ಇನ್ನೊಂದು ಸಾಕಾರಿ ಗುರಿ, ಆದ್ದರಿಂದ ನಿರಾಕಾರಿ ಮತ್ತು ನಿರ್ವಿಕಾರಿ ಇವಾಗಿವೆ ಎರಡು ಗುರಿಗಳು. ಇಡೀ ದಿನ ಯೋಗಿ ಮತ್ತು ಪವಿತ್ರರಾಗುವ ಪುರುಷಾರ್ಥ ಮಾಡುತ್ತೀರಲ್ಲವೇ? ಎಲ್ಲಿಯವರೆಗೆ ಪೂರ್ಣ ರೀತಿಯಲ್ಲಿ ಆತ್ಮಾಭಿಮಾನಿ ಆಗುವುದಿಲ್ಲವೋ ಅಲ್ಲಿಯವರೆಗೆ ನಿರ್ವಿಕಾರಿಯೂ ಆಗಲಾರಿರಿ. ನಿರ್ವಿಕಾರಿತನದ ಗುರಿ ಮತ್ತು ನಿರಾಕಾರಿತನದ ಗುರಿ, ಅದನ್ನು ಫರಿಶ್ತಾ ಅಥವಾ ಕರ್ಮಾತೀತ ಸ್ಥಿತಿ ಎಂದು ಹೇಳುತ್ತಾರೆ. ಆದರೆ ಫರಿಶ್ತಾ ಸಹ ಯಾವುದೇ ಅಪವಿತ್ರತೆಯಿಲ್ಲದಾಗ .ಅಂದರೆ ಪಂಚತತ್ವಗಳು ಆಕರ್ಷಣೆ ಮಾಡದಿದ್ದಾಗ ಆಗುವಿರಿ. ಮನಸ್ಸಿನಲ್ಲಿ ಸ್ವಲ್ಪವೂ ಅಪವಿತ್ರತೆ ಇರಬಾರದು. ಆಗ ಫರಿಶ್ತಾ ಸ್ಥಿತಿಯಲ್ಲಿ ಸ್ಥಿತ ರಾಗಬಲ್ಲರಿ. ಆದ್ದರಿಂದ ಈ ಡಬಲ್ ಗುರಿಯನ್ನು ಸದಾ ಸ್ಮೃತಿಯಲ್ಲಿ ಇಟ್ಟುಕೊಳ್ಳಿ.

ಡಬಲ್ ಪ್ರಾಪ್ತಿ ಯಾವುದು? ಅತೀಂದ್ರಿಯ ಸುಖದ ಪ್ರಾಪ್ತಿ, ಅದರಲ್ಲಿ ಶಾಂತಿ ಮತ್ತು ಖುಷಿ ಸಮಾವೇಶಗೊಂಡಿದೆ. ಇದಾಗಿದೆ ಸಂಗಮಯುಗದ ಆಸ್ತಿ, ಈಗ ಯಾವ ಪ್ರಾಪ್ತಿಯಿದೆಯೋ ಅದು ಮತ್ತೆ ಎಂದೂ ಪ್ರಾಪ್ತಿಯಾಗುವುದಿಲ್ಲ. ಡಬಲ್ ಪ್ರಾಪ್ತಿಯಾಗಿದೆ. ತಂದೆ ಮತ್ತು ಆಸ್ತಿ, ತಂದೆಯ ಪ್ರಾಪ್ತಿಯು ಇಡೀ ಕಲ್ಪದಲ್ಲಿ ಆಗುವುದಿಲ್ಲ ಮತ್ತು ತಂದೆಯಿಂದ ಈಗ ಯಾವ ಆಸ್ತಿ ಸಿಗುತ್ತದೆಯೋ ಅದೂ ಇಡೀ ಕಲ್ಪದಲ್ಲಿ ಈಗಲೇ ಸಿಗುತ್ತದೆ ಮತ್ತೆಂದೂ ಸಿಗುವುದಿಲ್ಲ. ಈ ಸಮಯದ ಪ್ರಾಪ್ತಿ ಆತೀಂದ್ರಿಯ ಸುಖ ಮತ್ತು ಪೂರ್ಣ ಜ್ಞಾನ ಮತ್ತೆ ಎಂದೂ ಸಿಗುವುದಿಲ್ಲ. ಎರಡು ಶಬ್ದಗಳಲ್ಲಿ ಡಬಲ್ ಪ್ರಾಪ್ತಿ – ತಂದೆ ಮತ್ತು ಆಸ್ತಿ. ಇದರಲ್ಲಿ ಜ್ಞಾನವೂ - ಬರುತ್ತದೆ. ಅತೀಂದ್ರಿಯ ಸುಖವೂ ಬರುತ್ತದೆ ಮತ್ತು ಆತ್ಮಿಕ ಖುಷಿಯೂ ಬರುತ್ತದೆ. ಆತ್ಮಿಕ ಶಕ್ತಿಯೂ ಬರುತ್ತದೆ. ಆದ್ದರಿಂದ ಇದಾಗಿದೆ ಡಬಲ್ ಪ್ರಾಪ್ತಿ. ತಿಳಿಯಿತೇ?

ತಮ್ಮನ್ನು ಕಂಬೈನ್ಡ್ ಎಂದು ತಿಳಿದಾಗ ಮಾತ್ರ ಈ ಎಲ್ಲಾ ಎರಡೆರಡು ಮಾತುಗಳನ್ನು ಧಾರಣೆ ಮಾಡಿಕೊಳ್ಳಲು ಸಾಧ್ಯ ಭಟ್ಟಿಯಲ್ಲಿ ಬಂದಿರುವಿರಲ್ಲವೇ? ಹಾಗಾದರೆ ಹೇಳಿದಂತಹ ಈ ಎಲ್ಲಾ ಎರಡೆರಡು ಮಾತುಗಳ ಸ್ಮೃತಿ-ಸ್ವರೂಪ ಭಟ್ಟಿಯಲ್ಲಿ ಆಗಿ ಹೋಗಿರಿ ಕೇವಲ ಕೇಳಿ ಹೋಗಬೇಡಿ. ಬಹಳಷ್ಟು ಕೇಳಿರುವಿರಿ. ಕೇಳುವುದು ಎಂದರೆ ಅರಿಯುವುದು ಮತ್ತು ನಡೆಯುವುದು ಅರ್ಥಾತ್ ಸ್ವರೂಪರಾಗುವುದು. ಜ್ಞಾನಿಯಾಗಿದ್ದೀರಿ ಆದರೆ ಜ್ಞಾನ ಸ್ವರೂಪರಾಗಿ ಹೋಗಿ. ಯೋಗಿಯಾಗಿದ್ದೀರಿ ಆದರೆ ಯೋಗಯುಕ್ತ, ಯುಕ್ತಿಯುಕ್ತರಾಗಿ ಹೋಗಿ. ತಪಸ್ವಿ ಕುಮಾರರಾಗಿದ್ದೀರಿ. ಆದರೆ ತ್ಯಾಗ- ಮೂರ್ತಿಯಾಗಿ ಹೋಗಿ. ತ್ಯಾಗ ಮೂರ್ತಿಯಾಗದೇ ತಪಸ್ವೀ ಮೂರ್ತಿಯಾಗಲಾರಿರಿ. ತಪಸ್ವಿಯಾಗಿರುವಿರಿ ಆದರೆ ಜೊತೆಗೆ ತ್ಯಾಗ- ಮೂರ್ತಿಯೂ ಆಗಬೇಕು. ಬ್ರಹ್ಮಾಕುಮಾರರಾಗಿದ್ದೀರಿ ಆದರೆ ಬ್ರಹ್ಮಾಕುಮಾರ ಅಥವಾ ಬ್ರಾಹ್ಮಣರ ಕುಲದ ಮರ್ಯಾದೆಗಳನ್ನು ತಿಳಿದು ಮರ್ಯಾದಾ ಪುರುಷೋತ್ತಮರಾಗಿ ಹೋಗಿ. ತಮ್ಮ ಒಂದೊಂದು ಸಂಕಲ್ಪ ವಾಯುಮಂಡಲದ ಮೇಲೆ ಪ್ರಭಾವ ಬೀರುವಂತಹ ಮರ್ಯಾದಾ ಪುರುಷೋತ್ತಮರಾಗಿ. ಈ ರೀತಿ ಶಕ್ತಿಶಾಲಿಯಾಗಿ ಹೋಗಿ. ಶಕ್ತಿಯಿದೆ ಆದರೆ ಶಕ್ತಿಪೂರ್ಣರಾಗಿ ಹೋಗಿ. ಯಾರು ಪೂರ್ಣರಾಗಿರುತ್ತಾರೋ ಅವರ ಪೂರ್ಣತೆಯ ಲಕ್ಷಣವಾಗಿದೆ ಎಂದೂ ಫೇಲ್ ಆಗುವುದಿಲ್ಲ. ಒಂದು ಎಂದೂ ಭಾವನೆಗಳಿಗೆ ವಶವಾಗುವುದಿಲ್ಲ, ಎರಡನೆಯದು ಫೇಲ್ ಆಗುವುದಿಲ್ಲ ಮತ್ತು ಕಲೆ (ಫೀಲ್, ಫೇಲ್, ಫ್ಲೋಲೆಸ್). ಆದ್ದರಿಂದ ಫುಲ್ ಆಗಿ ಹೋಗಿ. ಏನನ್ನು ಕಲಿಯಬೇಕು ಎಂಬುದಕ್ಕಾಗಿಯೇ ಭಟ್ಟಿಯಲ್ಲಿ ಬಂದಿರುವಿರಿ, ಬಹಳ ಪಾಠ ಓದಿದಿರಿ. ಇಷ್ಟು ಪಾಠವನ್ನು ಪ್ರ್ಯಾಕ್ಟಿಕಲ್ ಮಾಡಿ ಹೋಗಿ. ಪ್ರ್ಯಾಕ್ಟಿಕಲ್ ಕಾರ್ಯಗಳು ಪಾಠವಾಗುವಂತೆ ಈ ಪಾಠಗಳನ್ನು ಪಕ್ಕಾ ಮಾಡಿಕೊಳ್ಳಿ. ಒಂದು ಪಾಠ ಬಾಯಿಯಿಂದ ಹೇಳುವುದು, ಇನ್ನೊಂದು ಕಲಿಸುವುದು. ಬಾಯಿಯಿಂದ ಹೇಳಲಾಗುತ್ತದೆ, ಕರ್ಮದಿಂದ ಕಲಿಸಲಾಗುತ್ತದೆ. ಆದ್ದರಿಂದ ಪ್ರತಿಯೊಂದು ನಡೆನುಡಿ, ಒಂದೊಂದು ಪಾಠವಾಗಬೇಕು. ಪಾಠ ಓದುವುದರಿಂದ ಉನ್ನತಿಯಾಗುತ್ತದೆಯಲ್ಲವೇ? ಉನ್ನತಿಯನ್ನು ಪಡೆಯುವಂತಹ ರೀತಿಯಲ್ಲಿ ತಮ್ಮ ಒಂದೊಂದು ಕ್ರಿಯೆ ಎಲ್ಲರಿಗೂ ಓದಿಸಬೇಕು ಅಥವಾ ಕಲಿಸಬೇಕು. ಓದಬೇಕು ಮತ್ತು ಓದಿಸಬೇಕು. ಸಪ್ತಾಹದ ಕೋರ್ಸ್ ಎಲ್ಲರೂ ಮಾಡಿದ್ದೀರಲ್ಲವೇ? ಸಾಪ್ತಾಹಿಕ ಕೋರ್ಸನ್ನೇನು ಮಾಡಿದಿರೋ ಅದನ್ನು ಶಕ್ತಿಶಾಲಿಯಾಗಿ ಮಾಡಿರುವಿರೋ ಅಥವಾ ಕೇವಲ ಕೋರ್ಸ್ ಮಾಡಿದಿರೋ? ಕೋರ್ಸ್ ನ ಅರ್ಥವಾಗಿದೆ ತಮ್ಮಲ್ಲಿ ಬಲತುಂಬಿಕೊಳ್ಳುವುದು. ಬಲವನ್ನು ತುಂಬಿಕೊಳ್ಳದಿದ್ದರೆ ಆದೆಂತಹ ಕೋರ್ಸ್ ಮಾಡಿದಿರಿ? ನಿರ್ಬಲ ಆತ್ಮ ಶಕ್ತಿಶಾಲಿ ಆತ್ಮನಾಗಲು ಕೋರ್ಸ್ ಮಾಡಿಸಲಾಗುತ್ತದೆ. ಹಾಗಾದರೆ ಕೋರ್ಸ್ ನ ಫೋರ್ಸ್ ಇಲ್ಲದಿದ್ದರೆ ಅದು ಕೋರ್ಸ್ ಆಯಿತೇ? ಹಾಗಾದರೆ ಈಗ ಶಕ್ತಿಶಾಲಿ ಕೋರ್ಸ್ ಮಾಡಲು ಬಂದಿರುವಿರಲ್ಲವೇ? ಡಬಲ್ ತಿಲಕಧಾರಿಯೂ ಆಗಬೇಕು.

ಡಬಲ್ ತಿಲಕ ಯಾವುದು? ದಿನವೂ ತಮ್ಮ ತಿಲಕವನ್ನು ನೋಡುತ್ತೀರಾ? ಅಮೃತವೇಳೆ ಜ್ಞಾನ-ಸ್ನಾನ ಮಾಡುವಾಗ ತಿಲಕವನ್ನು ಹಚ್ಚುತ್ತೀರಾ? ಆತ್ಮಿಕ ಸ್ಮೃತಿ ಅಥವಾ ಸ್ವರೂಪದ ತಿಲಕವಾಯಿತು. ಎರಡನೆಯದಾಗಿದೆ ನಿಶ್ಚಯದ ತಿಲಕ, ಒಂದು ಆತ್ಮಿಕ ಸ್ಥಿತಿಯ ತಿಲಕ ಮತ್ತು ಎರಡನೆಯದು ನಾವು ವಿಜಯಿ ರತ್ನವಾಗಿದ್ದೇವೆ ಎಂಬ ತಿಲಕ. ಪ್ರತಿ ಸಂಕಲ್ಪ, ಪ್ರತಿ ಹೆಜ್ಜೆಯಲ್ಲಿ ಸಫಲತೆ ತುಂಬಿದೆ. ಇದಾಗಿದೆ ವಿಜಯದ ತಿಲಕ ಆದ್ದರಿಂದ ತಮ್ಮದು ವಿಜಯದ ಮತ್ತು ವಿಜಯಿ ರೂಪದ ತಿಲಕವಾಗಿದೆ. ಈ ಡಬಲ್ ತಿಲಕ ಸದಾ ಸ್ಥಿತಿಯಲ್ಲಿರಲಿ, ಸ್ಮೃತಿಯಲ್ಲಿರುವುದು ಎಂದರೆ ತಿಲಕಾರಿಯಾಗುವುದು. ಡಬಲ್ ತಿಲಕವನ್ನು ಎಂದೂ ಮರೆಯಬಾರದು.

ನಾನು ವಿಜಯಿಯಾಗಿದ್ದೇನೆ - ಈ ಸ್ಮೃತಿಯಲ್ಲಿರುವುದರಿಂದ ಎಂದಿಗೂ ಭಿನ್ನ ಭಿನ್ನ ಪರಿಸ್ಥಿತಿಗಳು ಅಲುಗಾಡಿಸುವುದಿಲ್ಲ. ವಿಜಯವಾಗಿದ್ದೇ ಇದೆ. ವರ್ತಮಾನ ಸಮಯ ತಮ್ಮ ಸ್ಥಿತಿ ಏರುಪೇರಾಗಲು ಕಾರಣ ವಿಜಯ ಎಂದರೆ ಸಫಲತೆಯಲ್ಲಿ ಡಗಮಗ ಕಂಡುಬರುತ್ತದೆ. ಆದರೆ ವಿಜಯ ಪ್ರತಿಯೊಂದು ಕರ್ತವ್ಯದಲ್ಲಿ ಆಗಿಯೇ ಇದೆ. ಹೇಗೆ ಯಾವಾಗಲಾದರೂ ಹವಾಮಾನ ಸರಿಯಾಗಿಲ್ಲದಿದ್ದರೆ ದೂರದರ್ಶನದಲ್ಲಿ ಸ್ಪಷ್ಟವಾಗಿ ಕಂಡುಬರುವುದಿಲ್ಲ. ಈ ರೀತಿ ತಮ್ಮ ಸ್ಥಿತಿಯ ಏರಿಳಿತದ ಕಾರಣ ವಿಜಯ ಅಥವಾ ಸಫಲತೆಯ ಸ್ಪಷ್ಟ ಅನುಭವ ಮಾಡುವುದಿಲ್ಲ. ಕಾರಣವೇನು? ತಮ್ಮ ಸ್ಥಿತಿಯ ಏರಿಳಿತ ಸ್ಪಷ್ಟವನ್ನು ಅಸ್ಪಷ್ಟ ಮಾಡುತ್ತದೆ. ಗೊಂದಲದಲ್ಲಿ ಬರುವ ಕಾರಣ ಉಜ್ವಲವಾಗುವುದಿಲ್ಲ. ಆದ್ದರಿಂದ ತಮ್ಮ ಸ್ಥಿತಿಯ ಏರಿಳಿತವಿಲ್ಲದಿದ್ದರೆ. ಸ್ಮೃತಿ ಸ್ಪಷ್ಟವಾಗಿರುವುದು. ಅಲ್ಲಿ ವಾತಾವರಣದ ಸ್ಪಷ್ಟತೆ, ಇದಾಗಿದೆ ಸ್ಮೃತಿಯ ಸ್ವಚ್ಛತೆ. ಸ್ಮೃತಿ ಸ್ಪಷ್ಟವಾಗಿದ್ದರೆ, ಸಫಲತೆಯೂ ಸ್ಪಷ್ಟ ರೂಪದಲ್ಲಿ ಕಂಡು ಬರುವುದು. ಸ್ಥಿತಿ ಸ್ಪಷ್ಟವಾಗಿಲ್ಲದಿದ್ದರೆ ಅಥವಾ ತಮ್ಮ ಮೇಲೆ ಪೂರ್ಣ ಎಚ್ಚರಿಕೆಯಿಲ್ಲದಿದ್ದರೆ, ಕಡಿಮೆ ಎಚ್ಚರಿಕೆಯಿರುವ ಕಾರಣ ಫಲಿತಾಂಶ ಪೂರ್ಣ ಕಂಡುಬರುವುದಿಲ್ಲ. ಎಷ್ಟು ತಮ್ಮ ಮೇಲೆ ಎಚ್ಚರಿಕೆಯಿರುವುದೋ ಅಷ್ಟು ಸ್ಪಷ್ಟವಾಗಿರುತ್ತೀರಿ ಮತ್ತು ಅಷ್ಟೇ ಸಫಲತೆ ತಮ್ಮ ಪುರುಷಾರ್ಥದಲ್ಲಿ ಅಥವಾ ಸೇವೆಯಲ್ಲಿ ಸ್ಪಷ್ಟ ಮತ್ತು ಸಮೀಪ ಕಂಡು ಬರುತ್ತದೆ. ಇಲ್ಲವಾದರೆ ಸ್ಪಷ್ಟವಾಗಿ ಮತ್ತು ಸಮೀಪದಲ್ಲಿ ಕಂಡು ಬರುವುದಿಲ್ಲ. ದೂರದರ್ಶನದಲ್ಲಿ ದೂರದ ದೃಶ್ಯ ಸಮೀಪ ಮತ್ತು ಸ್ಪಷ್ಟವಾಗಿರುತ್ತದೆ. ಅದೇ ರೀತಿ ಏಕರಸ ಸ್ಥಿತಿಯಿದ್ದರೆ, ನಿಮ್ಮ ಮೇಲೆ ನಿಮಗೆ ಗಮನ ಮತ್ತು ಸ್ಪಷ್ಟವಾಗಿದ್ದರೆ ಸಫಲತೆ ಸಮೀಪ ಮುತ್ತು ಸ್ಪಷ್ಟವಾಗಿ ಕಂಡುಬರುತ್ತದೆ. ತಿಳಿಯಿತೇ? ಈ ಎರಡರಲ್ಲಿ ಒಂದು ಕಡಿಮೆಯಾದರೆ ಸಫಲತೆಯ ಅನುಭವ ಮಾಡಲಾಗುವುದಿಲ್ಲ, ಗೊಂದಲಕ್ಕೊಳಗಾಗುವಿರಿ. "ಆಮೇಲೆ "ಏನು ಮಾಡಲಿ, ಹೇಗೆ ಆಗುವುದು ಎಂಬ ದುರ್ಬಲತೆಯ ಭಾಷೆಯಾಗುವುದು. ಆದ್ದರಿಂದ ಎರಡೂ ವಿಷಯಗಳನ್ನು ಧಾರಣೆ ಮಾಡಿಕೊಂಡು ಹೋದರೆ ಸಫಲತೆಯ ಮೂರ್ತಿಯಾಗುವಿರಿ. ಆಗ ಸಫಲತೆ ಕೊರಳ ಮಾಲೆ ಸಮೀಪ ಬರುವುದು. ಆದ್ದರಿಂದ ಸಫಲತೆಯೂ ಕೊರಳ ಹಾರವಾಗುವುದು. ಒಳ್ಳೆಯದು.

ಅವ್ಯಕ್ತ ಮುರಳಿ 20-08-1971.

***ಎಲ್ಲಕ್ಕಿಂತ ಶ್ರೇಷ್ಠ ಸಿಂಹಾಸನ ಮತ್ತು ಕಿರೀಟ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಡಬಲ್ ಕೋರ್ಸ್ ನಿಂದ ಸ್ವಯಂನಲ್ಲಿ ಸದಾ ಬಲವನ್ನು ತುಂಬಿಕೊಂಡಿರುವ ಡಬಲ್ ಶಕ್ತಿ ಸ್ವರೂಪ.

2. ನಾನು ಪ್ರಕಾಶದ ಕಿರೀಟ & ಶಕ್ತಿಯ ಕಿರೀಟವನ್ನು ಧಾರಣೆ ಮಾಡಿರುವ ಡಬಲ್ ಕಿರೀಟಧಾರಿ.

3. ನಾನು ಭ್ರುಕುಟಿ ಸಿಂಹಾಸನದ ಮೇಲೆ ಅಕಾಲಮೂರ್ತಿಯ ಸ್ಥಿತಿಯಲ್ಲಿ ಅಚಲವಾಗಿ, ಸ್ಥಿರವಾಗಿ, ಏಕರಸ ಸ್ಥಿತಿಯಲ್ಲಿ ಸ್ಥಿತವಾಗಿರುವ ತಂದೆಯ ಹೃದಯ ಸಿಂಹಾಸನಾಧಿಕಾರಿ.

4. ನಾನು ಜ್ಞಾನವನ್ನು ತಿಳಿದುಕೊಂಡು, ಅಂಗೀಕರಿಸಿ, ಜ್ಞಾನದನುಸಾರ ನಡೆಯುತ್ತಿರುವ ಜ್ಞಾನ ಸ್ವರೂಪ.

5. ನಾನು ನನ್ನ ಸೇವೆಯಿಂದ ನನ್ನ ರಾಜಧಾನಿಯನ್ನು ರಚಿಸಿಕೊಂಡು, ಬುದ್ಧಿಯಲ್ಲಿ ಶುದ್ಧ ಸಂಕಲ್ಪಗಳನ್ನು ರಚಿಸುವುದರಿಂದ ಸದಾ ಏಕರಸ ಸ್ಥಿತಿಯಲ್ಲಿ ಇದ್ದೇನೆ.

6. ನಾನು ಸಾಕಾರದಲ್ಲಿ ಬ್ರಹ್ಮಕುಮಾರಿ/ ಕುಮಾರನು ಮತ್ತು ನಿರಾಕಾರದಲ್ಲಿ ಆತ್ಮರೆಲ್ಲರಲ್ಲಿ ಹೀರೋ ಪಾತ್ರಧಾರಿ, ಶ್ರೇಷ್ಠ ಆತ್ಮನು - ಎಂಬ ಈ ಎರಡು ಪದವಿಯ ಸ್ಮೃತಿಯಿಂದ ನನ್ನ ಕರ್ಮ ಮತ್ತು ಸಂಕಲ್ಪವನ್ನು ಶ್ರೇಷ್ಠವಾಗಿ ತಯಾರು ಮಾಡಿಕೊಂಡಿದ್ದೇನೆ.

7. ನಾನು ಶ್ರೇಷ್ಠ ಆತ್ಮ ಅಥವಾ ಹೀರೋ ಎಂದು ಭಾವಿಸುವುದರಿಂದ ಈಶ್ವರೀಯ ಮರ್ಯಾದೆಗಳಲ್ಲಿ ಅಥವಾ ಬ್ರಾಹ್ಮಣ ಕುಲದ ಮರ್ಯಾದೆಗಳಲ್ಲಿ ಸ್ಥಿತನಾಗಿ ಇದ್ದೇನೆ.

8. ನಾನು ನಿರಾಕಾರಿ, ನಿರ್ವಿಕಾರಿ ಸ್ಥಿತಿ ಅರ್ಥಾತ್ ಎರಡು ಗುರಿಗಳನ್ನು ಸದಾ ಧಾರಣೆ ಮಾಡಿ ಕರ್ಮಾತೀತ ಸ್ಥಿತಿಗೆ ತಲುಪಿದ್ದೇನೆ.

9. ನಾನು ತಂದೆಯನ್ನು & ಆಸ್ತಿಯನ್ನು (ಅತೀಂದ್ರಿಯ ಸುಖ, ಆತ್ಮಿಕ ಸಂತೋಷ, ಜ್ಞಾನ, ಆತ್ಮಿಕ ಶಕ್ತಿ) ಪಡೆದಿರುವ ಸರ್ವಪ್ರಾಪ್ತಿ ಸ್ವರೂಪ.

10. ನಾನು ಜ್ಞಾನ ಸ್ವರೂಪವಾಗಿ, ಯೋಗಯುಕ್ತವಾಗಿ, ಯುಕ್ತಿಯುಕ್ತವಾಗಿ, ತ್ಯಾಗ ಮೂರ್ತಿಯಾಗಿ ಮತ್ತು ಬ್ರಾಹ್ಮಣಕುಲ ಮರ್ಯಾದೆಯನ್ನು ತಿಳಿದುಕೊಂಡಿರುವ ಮರ್ಯಾದಾ ಪುರುಷೋತ್ತಮನು.

11. ನನ್ನ ಒಂದೊಂದು ಸಂಕಲ್ಪ ವಾಯುಮಂಡಲದ ಮೇಲೆ ಪ್ರಭಾವ ಬೀರುವಂತಹ ಶಕ್ತಿಶಾಲಿ ಸ್ವರೂಪ.

12. ನನ್ನ ಮುಖದಿಂದ ಜ್ಞಾನವನ್ನು ಹೇಳುವುದೇ ಅಲ್ಲದೆ ಪ್ರತ್ಯಕ್ಷ ಕರ್ಮದಿಂದಲೂ ಪಾಠವನ್ನು ತಿಳಿಸಿ, ನನ್ನ ಉನ್ನತಿಯನ್ನು ಮಾಡಿಕೊಂಡಿದ್ದೇನೆ.

13. ನಾನು ಆತ್ಮಿಕ ತಿಲಕ, ವಿಜಯೀ ತಿಲಕ (ನಿಶ್ಚಯವೆಂಬ ತಿಲಕ) ವನ್ನು ಧರಿಸಿ ಪ್ರತಿ ಸಂಕಲ್ಪ, ಪ್ರತಿ ಹೆಜ್ಜೆಯಲ್ಲಿ ವಿಜಯವನ್ನು, ಸಫಲತೆಯನ್ನು ಪಡೆದಿರುವ ಡಬಲ್ ತಿಲಕಧಾರಿ.

14. ನಾನು ನನ್ನ ಸ್ಮೃತಿ ಮತ್ತು ಸ್ಥಿತಿಯನ್ನು ಸ್ಪಷ್ಟವಾಗಿಟ್ಟುಕೊಂಡು, ಸ್ವಯಂನ ಪ್ರತಿ ಎಚ್ಚರಿಕೆಯಿಂದ ಇರುತ್ತಾ, ಪುರುಷಾರ್ಥದಲ್ಲಿ ಮತ್ತು ಸೇವೆಯಲ್ಲಿ ಸಫಲತೆಯನ್ನು ಸ್ಪಷ್ಟವಾಗಿ ಅನುಭವ ಮಾಡಿಕೊಂಡಿದ್ದೇನೆ.